# ಭಾರತೀಯ ರಾಜ್ಯಾಡಳಿತದ ಆಧ್ಯಾತ್ಮಿಕ ಹಿನ್ನೆಲೆ

**ಸ್ವಾಮಿ ರಂಗನಾಥಾನಂದ**

*ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ಪ್ರಸ್ತುತ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದಾರೆ. ಹಲವು ದಶಕಗಳ ಅವರ ಚಿಂತನಾವಾಹಿನಿಯು The Eternal Values for a Changing Society ಎಂಬ ನಾಲ್ಕು ಸಂಪುಟಗಳ ಬೃಹತ್ ಗ್ರಂಥರೂಪದಲ್ಲಿ ಪ್ರಕಟವಾಗಿದೆ. ಇದು "ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು" ಎಂಬ ಶೀರ್ಷಿಕೆಯಲ್ಲಿ ಕನ್ನಡದಲ್ಲಿ ಪ್ರಕಟವಾಗಿದೆ. ಇದರಿಂದ ಆಯ್ದ ಭಾಗಗಳನ್ನು ಇಲ್ಲಿ ಲೇಖನ ರೂಪದಲ್ಲಿ ಕೊಡಲಾಗಿದೆ. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಡಾ. ಹೆಚ್. ರಾಮಚಂದ್ರಸ್ವಾಮಿ. ಶ್ರುತಿ ಮತ್ತು ಸ್ಮೃತಿಗಳ ಒಂದು ಅಪೂರ್ವ ವ್ಯಾಖ್ಯಾನವನ್ನು ಈ ಲೇಖನದಲ್ಲಿ ಕಾಣುತ್ತೇವೆ.*



## ಕುಲಾನುಕ್ರಮ ಧರ್ಮ ಹಾಗೂ ಆಧ್ಯಾತ್ಮಿಕ ಧರ್ಮ

ಧರ್ಮದ ವೈಜ್ಞಾನಿಕ ಅಧ್ಯಯನವು ಪ್ರತಿಯೊಂದು ಧರ್ಮದಲ್ಲಿ, ಅದರಲ್ಲೂ ತುಂಬ ವಿಕಾಸಹೊಂದಿದ ವಿಶ್ವಧರ್ಮಗಳಲ್ಲಿ, ಸಾಮಾಜಿಕ-ರಾಜಕೀಯವಾಗಿ ಅಭಿವ್ಯಕ್ತಿಯಾಗಿರುವ ಧರ್ಮ ಹಾಗೂ ಭಗವಂತನ ಅನುಭವಕ್ಕೆ ಮಾರ್ಗದರ್ಶಿಯಾಗಿರುವ ಅಥವಾ ತತ್ಸಮ ಮೌಲಿಕತೆಯನ್ನುಳ್ಳ ಧರ್ಮ ಎಂಬ ಎರಡು ಆಯಾಮಗಳಿರುವುದನ್ನು ತೋರಿಸಿಕೊಡುತ್ತದೆ. ಮೊದಲನೆಯದರಲ್ಲಿ ಧರ್ಮದ ವಿಧಿ-ನಿಷೇಧಗಳು, ಆಹಾರ, ಉಡುಪು, ಮದುವೆ ಮತ್ತಿತರ ಸಾಮಾಜಿಕ ಶಿಸ್ತುಗಳ ಕುರಿತಾದ ನಿಯಮಗಳು ಹಾಗೂ ಸೃಷ್ಟಿಯ ಕುರಿತಾದ ವಾದಗಳು, ಪುರಾಣಕಥೆಗಳು, ದಂತಕಥೆಗಳು ಇತ್ಯಾದಿಗಳು ಅಡಕವಾಗಿವೆ. ಇವೆಲ್ಲಾ ಸೇರಿ ಧರ್ಮದ ಸಾಮಾಜಿಕ-ರಾಜಕೀಯ ಭಾಗವೆನಿಸಿಕೊಳ್ಳುತ್ತವೆ; ಜನಗಣತಿಯ ದಾಖಲೆಗಳಲ್ಲಿ ಅಭಿವ್ಯಕ್ತಿ ಪಡೆಯುತ್ತವೆ; ಇತರ ಧರ್ಮಗಳಿಂದ ವಿಭಿನ್ನವಾಗಿರುವುದನ್ನು ಎತ್ತಿ ತೋರಿಸಲು ಕಾರಣವಾಗಿವೆ. ಐತಿಹಾಸಿಕ ಕಟ್ಟುಪಾಡುಗಳಿಗೊಳಪಟ್ಟು, ಧರ್ಮದ ಕೇವಲ ಸಾಮಾಜಿಕ-ರಾಜಕೀಯ ಅಭಿವ್ಯಕ್ತಿಗಳಾದ ಇವು ಧರ್ಮದ ವಿಜ್ಞಾನವೆನ್ನಿಸಿಕೊಳ್ಳಲಾರವು. ಧರ್ಮದ ವಿಜ್ಞಾನವೆನ್ನಬಹುದಾದದ್ದು ಧರ್ಮಗಳನ್ನು *ಭಕ್ತಿಯೋಗ ಜ್ಞಾನಯೋಗ ರಾಜಯೋಗ ಕರ್ಮಯೋಗ*ಗಳ ಒಳತಿರುಳ ಆಧಾರದ ಮೇಲೆ ವರ್ಗೀಕರಿಸುತ್ತದೆ. ಧರ್ಮದ ಈ ಎರಡನೆಯ ಆಯಾಮವು ವೈಯಕ್ತಿಕ ನೈತಿಕತೆ, ಆರಾಧನೆ, ಉಪಾಸನೆ ಮತ್ತು ಮನುಷ್ಯನ ಆಧ್ಯಾತ್ಮಿಕ ಬೆಳವಣಿಗೆಗೆಂದೇ ಗೊತ್ತಾದ ಶಿಸ್ತುಗಳಿಂದ ಕೂಡಿದ ನೈಜ ಆಧ್ಯಾತ್ಮಿಕ ಭಾಗವನ್ನು ಒಳಗೊಂಡಿದೆ. ಈ ಅಂಶಗಳು ಎಂದೂ ವ್ಯತ್ಯಯಗೊಳ್ಳದ ಮೂಲಭೂತ ಧರ್ಮದ ಸಾರ್ವತ್ರಿಕ ಸಾರವನ್ನು ಒಳಗೊಂಡಿವೆ; ಧರ್ಮದ ಆ ಮೊದಲ ಆಯಾಮವಾದರೋ ಕಾಲಕಾಲಕ್ಕೆ ಬದಲಾಗಬಹುದಾದ ಅಮುಖ್ಯ ಅಂಶಗಳಿಂದ ಕೂಡಿದೆ. ಅದೂ ಆವಶ್ಯಕ, ಆದರೆ ಅದು ಎರಡನೆಯದರ ಅಂತಃಸ್ಸತ್ವವನ್ನು ಕುಗ್ಗಿಸಬಾರದು.

ಭಾರತೀಯ ಸಂಪ್ರದಾಯವು ಧರ್ಮದ ಮೊದಲ ಆಯಾಮವನ್ನು ಸ್ಮೃತಿ ಎಂತಲೂ ಎರಡನೆಯದನ್ನು ಶ್ರುತಿ ಎಂತಲೂ ಕರೆಯುತ್ತದೆ. ಶ್ರುತಿಯನ್ನು ಚಿರಂತನ ಸಾರ್ವತ್ರಿಕ ಸತ್ಯವೆಂದೂ ಸ್ಮೃತಿಯನ್ನು ತಾತ್ಕಾಲಿಕ, ಆನುಷಂಗಿಕ ಹಾಗೂ ಆನ್ವಯಿಕ ಎಂದೂ ಪರಿಗಣಿಸುತ್ತದೆ. ಅಂತೆಯೇ ಶ್ರುತಿಯು ಶಾಶ್ವತವಾಗಿ ಉಳಿಯುವ ಸನಾತನ ಧರ್ಮವನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಭಾರತದಲ್ಲಿ ಒಂದು ಕಾಲದಲ್ಲಿ ಸಂಗತವಾಗಿದ್ದ ಯುಗಧರ್ಮದ ಅಂಶಗಳು ಆ ನಂತರದ ಪೀಳಿಗೆಯ ಜನರಿಗೆ, ಬದುಕಿನ ಪರಿಸ್ಥಿತಿಗಳ ಬದಲಾವಣೆಯ ಕಾರಣದಿಂದ ಅನ್ವಯವಾಗಬೇಕೆಂದೇನೂ ಇಲ್ಲ. ಹೀಗೆ, ಬದಲಾದ ಸಾಮಾಜಿಕ ಪರಿಸ್ಥಿತಿಗಳಿಂದಾಗಿ ಖಿಲವಾಗಿರುವ, ಅಪಾಯಕಾರಿಯೂ ಆಗಬಹುದಾದ ಸ್ಮೃತಿಗಳಲ್ಲಿ, ಹೊಸ ಕಾಲಕ್ಕೆ ಸಂಗತವಾಗುವಂತೆ ಅವಶ್ಯ ಬದಲಾವಣೆಗಳಿಗೆ ಭಾರತೀಯ ಸಂಪ್ರದಾಯವು ಅವಕಾಶ ಮಾಡಿಕೊಡುತ್ತದೆ. ಖಿಲವಾಗಿ ಹೋಗಿರುವ ಈ ಸಾಮಾಜಿಕ-ಧಾರ್ಮಿಕ ಸಂಪ್ರದಾಯಗಳ ಪ್ರಾಬಲ್ಯವು ಮಾನವೀಯ ಹಾಗೂ ಸಾಮಾಜಿಕ ವಿಕೃತಿಗಳಿಗೆ ಕಾರಣವಾಗುತ್ತದೆ; ಅಂಥ ಸಂಪ್ರದಾಯಗಳು

ಸಾಮಾಜಿಕ ರೂಢಿಗಳ ನಿಷ್ಠುರತೆಗೆ, ಮಾನವವಿರೋಧಿ ಅನುಷ್ಠಾನಗಳಿಗೆ, ಧರ್ಮ-ಧರ್ಮಗಳೊಳಗಿನ ಘರ್ಷಣೆಗಳಿಗೆ, ಅಸಾಮಂಜಸ್ಯಗಳಿಗೆ, ಹಿಂಸೆಗಳಿಗೆ, ಮಾನವಭಾವನೆಗಳ ಜಡ್ಡು ಗಟ್ಟುವಿಕೆಗೆ ಪೋಷಕವಾಗುತ್ತವೆ.

**ಧರ್ಮದ ಹೆಸರಿನಲ್ಲಿ ಆಡುವ ಕಚ್ಚಾಟವೆಲ್ಲ ಹೊರಗಿನ ಕರಟಕ್ಕೆ ಸಂಬಂಧಿಸಿದುದು. ಯಾವಾಗ ಅಧ್ಯಾತ್ಮ ಮತ್ತು ಪಾವಿತ್ರ್ಯ ಹೃದಯದಿಂದ ಮಾಯವಾಗುವುವೋ, ಹೃದಯ ಶುಷ್ಕವಾಗುವುದೊ, ಆಗಲೆ ಧರ್ಮದ ಹೆಸರಿನಲ್ಲಿ ಕಚ್ಚಾಟ ಆರಂಭವಾಗುವುದು.**

***—ಸ್ವಾಮಿ ವಿವೇಕಾನಂದ.***

ಈ ಶ್ರುತಿ-ಸ್ಮೃತಿಗಳ ಕಲ್ಪನೆಯ ಬೆಳಕಿನಲ್ಲಿ, ವಿಜ್ಞಾನವು ಸಂಗತವಾಗುವುದು ಭಗವಂತನೆಡೆಗೆ ಕರೆದೊಯ್ಯುವ ಧರ್ಮದ ಆಧ್ಯಾತ್ಮಿಕ ಅಂಶಗಳನ್ನು ಪ್ರತಿನಿಧಿಸುವ ಶ್ರುತಿಯ ಜೊತೆಗೇ ಹೊರತು, ಸಾಮಾಜಿಕ-ರಾಜಕೀಯ ಅಭಿವ್ಯಕ್ತಿಯಾದ ಸ್ಮೃತಿಯ ಜೊತೆಗೆ ಅಲ್ಲವೆಂಬುದನ್ನು ಮನಗಾಣಬಹುದು. ಕುಲಾನುಕ್ರಮ ಧರ್ಮವೆಂಬ ಮಾತು ಗುಂಪು ಪ್ರತ್ಯೇಕತೆಯ, ಜಾತಿನಿಷ್ಠೆಯ ಈ ಸ್ಮೃತಿ ಅಂಶದ ಪ್ರಾಬಲ್ಯಕ್ಕೆ ಒತ್ತುಕೊಡುತ್ತದೆ. ಈ ಕುಲಾನುಕ್ರಮ ಧರ್ಮವೇ ಕಾಲ ಸರಿದಂತೆ ನಿಂತ ನೀರಿನಂತಾಗುವುದು, ಸಾಮಾಜಿಕ ಬದಲಾವಣೆಯನ್ನು ವಿರೋಧಿಸುವುದು, ಭೌತ ವಿಜ್ಞಾನದ ಹಾಗೂ ಎಲ್ಲ ಸೃಜನಶೀಲ ಸಾಮಾಜಿಕ ಪ್ರಯತ್ನಗಳ ಜೊತೆಗೆ ಸಂಘರ್ಷಕ್ಕಿಳಿಯುವುದು. ಇದೇ ಎಲ್ಲ ಧರ್ಮಗಳಲ್ಲಿಯೂ ಪುರೋಹಿತಶಾಹಿಯಲ್ಲಿ, ಊಳಿಗಮಾನ್ಯ ಅಧಿಕಾರ ಸ್ಥಾನದಲ್ಲಿ ಕೇಂದ್ರೀಕೃತವಾಗುವುದು; ಧರ್ಮದ ಸಾರ್ವತ್ರಿಕ ಆಧ್ಯಾತ್ಮಿಕ ಅಂಶವು ಪ್ರವಾದಿಯಲ್ಲಿ, ಅವತಾರಪುರುಷನಲ್ಲಿ ಕೇಂದ್ರೀಕೃತವಾಗುವುದು. ಹಿಂದೂ ಸಂಪ್ರದಾಯದ ಪ್ರಕಾರ, ಮಾನವನ ಪಾರಮಾರ್ಥಿಕ ಪುರೋಭಿವೃದ್ಧಿ ಸಾಧ್ಯವಾಗಬೇಕಾದರೆ ಈ ಕುಲಾನುಕ್ರಮ ಅಂಶವು ಒಂದು ವೇಳೆ ಉಳಿದು ಬಂದರೂ ಆಧ್ಯಾತ್ಮಿಕ ಅಂಶಕ್ಕೆ ಎರಡನೆಯದಾಗಿಯೇ ಮುಂದುವರೆಯಬೇಕು.

## ಭಾರತೀಯ ಸಾಂಪ್ರದಾಯಿಕ ದೃಷ್ಟಿ

ಪುರಾತನ ಹಾಗೂ ನವಯುಗದ ಭಾರತೀಯ ಇತಿಹಾಸದಲ್ಲಿ ರಕ್ತಪಾತದ ಕ್ರಾಂತಿಗಳಾಗಲಿ ಹಿಂಸಾತ್ಮಕ ಸಾಮಾಜಿಕ ಪುನರುತ್ಥಾನಗಳಾಗಲಿ ಇಲ್ಲದಿರುವುದರಲ್ಲಿ ನಮಗೆ ಈ ಸಾಮಾಜಿಕ ವಿವೇಕದ ಸತ್ಫಲ ಕಾಣಿಸುತ್ತದೆ. ಬದಲಿಗೆ ಮೂಲಭೂತ ಮೌಲ್ಯಗಳಿಗೆ ಧಕ್ಕೆಯಾಗದಂತೆ ಹೊಸ ಪರಿಸ್ಥಿತಿಗಳಿಗೆ ಹೊಂದಾಣಿಕೆ ಮಾಡಿಕೊಂಡು ಬರುತ್ತಿರುವುದನ್ನು ಮಾತ್ರ ಕಾಣುತ್ತೇವೆ. ಭಾರತೀಯ ಸಾಮಾಜಿಕ ಅನುಭವವು ಯಾವಾಗಲೂ ವಿಕಾಸದ್ದೇ ಹೊರತು ಕ್ರಾಂತಿಯದಲ್ಲ; ಅಥವಾ ತೀವ್ರ ಸಾಮಾಜಿಕ ಘರ್ಷಣೆಯಾಗಲಿ ಹಿಂಸೆಯಾಗಲಿ ಇಲ್ಲದ ವಿಕಾಸದ ಹಾದಿಯ ಕ್ರಾಂತಿಕಾರಿ ಸ್ವಭಾವದ ಬದಲಾವಣೆಗಳೆನ್ನಬಹುದು. ಕೃಷ್ಣ-ಬುದ್ಧರ, ಶಂಕರರ ಅಥವಾ ಇನ್ನೂ ನಂತರದ ಸಮಾಜಸುಧಾರಕರ ಪ್ರಭಾವವು ಯಾವಾಗಲೂ ಶಾಂತಿಯುತ, ಸೃಜನಾತ್ಮಕ ಹಾಗೂ ಮನವೊಲಿಸುವ ರೀತಿಯದ್ದೇ ಆಗಿತ್ತು; ಭಾರತವು ಆ ಪ್ರಭಾವಗಳಿಗೆ ಸಹಜ ಸ್ವಾಭಾವಿಕವಾಗಿಯೇ ಪ್ರತಿಕ್ರಿಯಿಸಿತು, ಆ ಮೂಲಕ ಶ್ರೀಮಂತವಾಯಿತು. ಭಾರತೀಯ ಇತಿಹಾಸವನ್ನು ಅಧ್ಯಯನ ಮಾಡಿದರೆ, ಬದಲಾಗದ ಭಾರತೀಯ ಸಮಾಜವೆಂಬ ಮಾತೇ ತಪ್ಪೆಂದು ತಿಳಿದುಬರುವುದು. ಧಾರ್ಮಿಕ ರೂಪ-ಕಲ್ಪನೆಗಳು ಮತ್ತು ಸಾಮಾಜಿಕ ವಿಧಿವಿಧಾನ-ಮೌಲ್ಯಗಳು ಇವೆರಡರಲ್ಲೂ ಭಾರತವು ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡಿದೆ. ಡಾ. ಎಸ್. ರಾಧಾಕೃಷ್ಣನ್ ಹೇಳುವಂತೆ, "ಹಿಂದೂ ಸ್ಮೃತಿವ್ಯಾಖ್ಯಾನಕಾರರ ಕೃತಿಗಳ ಪರಿಚಯ ಇರುವವರಿಗೆ ಅವುಗಳಿಂದ ಆಗಿರುವ ವ್ಯಾಪಕ ಬದಲಾವಣೆಗಳೆಷ್ಟೆಂಬುದು ಗೊತ್ತು. ಹಿಂದೂಧರ್ಮದ ಮುಖ್ಯ ಲಕ್ಷಣವೇ ಈ ಸಾಮಾಜಿಕ ಸಡಿಲತೆ. ಸನಾತನ ಧರ್ಮವನ್ನು ಎತ್ತಿಹಿಡಿಯುವುದೆಂದರೆ ಸುಮ್ಮನೆ ನಿಲ್ಲುವುದಲ್ಲ; ಜೀವಂತ ತತ್ತ್ವಗಳನ್ನು ಗ್ರಹಿಸಿ ಅವುಗಳನ್ನು ಇಂದಿನ ಬದುಕಿಗೆ ಅಳವಡಿಸಿಕೊಳ್ಳುವುದು. ನಿಜವಾದ ಬೆಳವಣಿಗೆಯೆಲ್ಲವೂ ಬದಲಾವಣೆಯ ಮೂಲಕವೂ ಏಕತೆಯನ್ನು ಕಾಪಾಡಿಕೊಂಡಿರುತ್ತದೆ" (*Religion and Society*, p. 114-15).

ಋಗ್ವೇದದ ಕಾಲದಲ್ಲಿದ್ದ ಯಾವ ದೇವರುಗಳಾಗಲಿ ಋಗ್ವೇದದ ಸಮಾಜದಲ್ಲಿದ್ದ ಅವರುಗಳ ಉಪಾಸನಾಕ್ರಮವಾಗಲಿ ಸಾವಿರ ವರ್ಷಗಳ ನಂತರ ಉಳಿದಿರಲಿಲ್ಲ. ಅನೇಕ ಸ್ಮೃತಿಗಳಿರುವುದೇ ಸಾಮಾಜಿಕ ಬದಲಾವಣೆಗಳಾಗಿರುವುದಕ್ಕೆ ಸಾಕ್ಷಿ; ಇಲ್ಲವಾದರೆ ಮೊದಲನೆಯ ಸ್ಮೃತಿಯೆ ಉದ್ದಕ್ಕೂ ಮುಂದುವರೆದಿರಬೇಕಾಗಿತ್ತು. ಶ್ರುತಿಗಳಿಂದ ಪ್ರತಿನಿಧಿಸಲ್ಪಟ್ಟ ಪರಂಪರಾಗತವಾದ ಭಾರತೀಯ ಆಧ್ಯಾತ್ಮಿಕತೆಯು ಇಂದಿಗೂ ಸ್ಪಷ್ಟವಾಗಿಯೂ ಸ್ಥಿರವಾಗಿಯೂ ಉಳಿದುಬಂದಿದೆ. ಸ್ಮೃತಿಗಳಿಂದ ಪ್ರತಿನಿಧಿಸಲ್ಪಡುವ ಸಾಮಾಜಿಕ ನಿಯಮಗಳ ಈ ಬದಲಾಗುವ ಗುಣವನ್ನು ಶ್ರೀರಾಮಕೃಷ್ಣರ ಸಾರಯುಕ್ತ ಮಾತು ಬೇರಾವುದಕ್ಕಿಂತ ಚೆನ್ನಾಗಿ ವಿವರಿಸುತ್ತದೆ: "(ಈಸ್ಟ್ ಇಂಡಿಯಾ) ಕಂಪೆನಿ ಆಳ್ವಿಕೆಯಲ್ಲಿ ಮೊಘಲ್ ನಾಣ್ಯಗಳು ನಡೆಯುವುದಿಲ್ಲ."

ಸ್ಮೃತಿಗಳೇ ಈ ಸಾಮಾಜಿಕ ಬದಲಾವಣೆಯ ಗುಣವನ್ನು ಒಪ್ಪಿಕೊಳ್ಳುತ್ತವೆ. ಮನುಸ್ಮೃತಿಯೆನ್ನುತ್ತದೆ: "ಮನುಷ್ಯರಿಗೆ ಕೃತಯುಗದಲ್ಲಿ ಒಂದು ಧರ್ಮ; ತ್ರೇತಾಯುಗ ದ್ವಾಪರಯುಗ ಕಲಿಯುಗಗಳಲ್ಲಿ ಬೇರೆಬೇರೆ ಧರ್ಮಗಳು; ಯುಗಗಳು ಬೇರೆಯಾದಂತೆ ಧರ್ಮಗಳೂ ಬೇರೆಯಾಗುವುವು" (ಮನುಸ್ಮೃತಿ, ೧.೮೫).

ಶ್ರೀರಾಮಕೃಷ್ಣರು ಇರುವ ಯಾವ ಧರ್ಮವನ್ನೂ ಬದ

ಲಾಯಿಸಲು ಹೋಗಲಿಲ್ಲ. ಹೊಸ ಧರ್ಮವನ್ನೂ ಸ್ಥಾಪಿಸ ಲೆತ್ನಿಸಲಿಲ್ಲ. ಅವರು ಎಲ್ಲ ಧರ್ಮಗಳನ್ನೂ ಪ್ರೀತಿಸಿದರಲ್ಲದೆ ಅವೆಲ್ಲವುಗಳ ಮೂಲಕವೂ ಭಗವತ್ಸಾಕ್ಷಾತ್ಕಾರ ಪಡೆಯಲೆತ್ನಿಸಿದರು. ತಮ್ಮ ಗುರುವಿನ ಈ ಮಾನವ ಆಧ್ಯಾತ್ಮಿಕ ಪುನರುತ್ಥಾನದ ವ್ಯಾಪಕ ಪ್ರಚಾರವನ್ನು ಸ್ವಾಮಿ ವಿವೇಕಾನಂದರು ಕೈಕೊಂಡರು. ಭಾರತೀಯ ಸಂಪ್ರದಾಯದ ಅಪಾಯಕಾರಿ ಪಳೆಯುಳಿಕೆಗಳಾದ ಜಾತಿಭೇದ, ಅಸ್ಪೃಶ್ಯತೆ, ಸ್ವಕೇಂದ್ರಿತ ಧಾರ್ಮಿಕತೆ ಮುಂತಾದುವುಗಳ ರೂಪದಲ್ಲಿ ಭಾರತದಲ್ಲಿಯೇ ಅವರಿಗೆ ಈ ಪ್ರಚಾರಕ್ಕೆ ಅಡ್ಡಿ-ಆತಂಕಗಳು ಕಾಣಿಸತೊಡಗಿದವು. ಅವರು ಕೊಲಂಬೋದಿಂದ ಆಲ್ಮೋರದವರೆಗೂ ಕೊಟ್ಟ ತಮ್ಮ ಉಪನ್ಯಾಸಗಳಲ್ಲಿ ಹಾಗೂ ತಮ್ಮ ಪತ್ರಗಳಲ್ಲಿ ಭಾರತೀಯ ಸಂಪ್ರದಾಯದ ಸ್ಮೃತಿಗಳಲ್ಲಿನ ಈ ಕುಂದುಕೊರತೆಗಳನ್ನು ತೋರಿಸಿಕೊಟ್ಟರಲ್ಲದೆ, ಅದೇ ಸಂಪ್ರದಾಯದ ಶ್ರುತಿಗಳಾದ ಉಪನಿಷತ್ತುಗಳಲ್ಲಿನ ವಿಶಾಲದೃಷ್ಟಿಯ, ಬಲವೀಯುವ, ಒಗ್ಗೂಡಿಸುವ ಆಧ್ಯಾತ್ಮಿಕತೆಯನ್ನು ದೇಶದ ಮುಂದಿಟ್ಟರು.

> **ವ್ಯಾಪಾರ ಮತ್ತು ವ್ಯಾಪಾರತತ್ತ್ವಗಳು ಧರ್ಮದಲ್ಲಿ ಸೇರಿಕೊಂಡರೆ ಆಧ್ಯಾತ್ಮಿಕತೆ ಸಾವನ್ನಪ್ಪುತ್ತದೆ.**
>
> *—ಸ್ವಾಮಿ ವಿವೇಕಾನಂದ.*

ತಮ್ಮ ದೇಶದ ಸಂಪ್ರದಾಯದ ಶ್ರುತಿಭಾಗದ ಶಕ್ತಿ ಮತ್ತು ವೈಭವಗಳನ್ನು ಅವರು ತಮ್ಮ ಗುರುವಿನ ಉಜ್ವಲ ಜೀವನದಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದರು. ಆದ್ದರಿಂದಲೇ ಅವರು ಭಾರತ ಸಂಪ್ರದಾಯದ ಈ ಹಳೆಯ ಜಡ ಅಂಶಗಳನ್ನು ಕಿತ್ತೊಗೆದು ಆರ್ಷೇಯ ಆಧ್ಯಾತ್ಮಿಕ ಸಂಪತ್ತನ್ನೂ ನವಪ್ರಪಂಚದ ವೈಜ್ಞಾನಿಕತೆ ಮತ್ತು ಸಾಮಾಜಿಕತೆಗಳನ್ನೂ ಆತ್ಮವನ್ನಾಗಿಸಿಕೊಳ್ಳಬಲ್ಲ ಒಂದು ಹೊಸ ರಾಜ್ಯವ್ಯವಸ್ಥೆಯನ್ನು ಕಟ್ಟಿಕೊಳ್ಳುವಂತೆ ದೇಶಕ್ಕೆ ಕರೆ ನೀಡಿದರು.

## ಈ ಆಧ್ಯಾತ್ಮಿಕ ವಿದ್ಯಾಭ್ಯಾಸದ ಫಲಿತಾಂಶಗಳು

ಇಡೀ ಜನಾಂಗದ ಈ ಆಧ್ಯಾತ್ಮಿಕ ವಿದ್ಯಾಭ್ಯಾಸದ ಫಲವನ್ನು ಮೂಲಭೂತ ಸಮಾಜಸುಧಾರಣೆಯ ಕ್ಷೇತ್ರದಲ್ಲಿ, ಕಳೆದ ಶತಮಾನದಲ್ಲಿಯ ಭಾರತದ ಅದ್ಭುತ ಸಾಧನೆಯಲ್ಲಿ ಕಾಣಬಹುದು. ಅಸ್ಪೃಶ್ಯತೆ ನಿವಾರಣೆ, ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ಕೊಟ್ಟದ್ದು, ಹಿಂದೂ ಧರ್ಮಶಾಸ್ತ್ರಗಳ ಸುಧಾರಣೆ, ಭಾರತ ಸಂವಿಧಾನದಲ್ಲಿ ಅಂತರ್ಪಂಥೀಯ ಸಂಬಂಧಗಳಲ್ಲಿ ಜಾತಿಯನ್ನು ಅವಗಣಿಸಿದ್ದು, ಪರಸ್ಪರರಲ್ಲಿ ತಿಂದುಣ್ಣುವ, ಮದುವೆಯಾಗುವ ವಿಚಾರಗಳಲ್ಲಿ ಜಾತಿ ಪಂಥಗಳ, ಬುಡಕಟ್ಟುಗಳ ಎಲ್ಲೆಗಳನ್ನು ಹರಿದೊಗೆದದ್ದು, ಸಮುದ್ರಯಾನ-ವಿದೇಶಯಾತ್ರೆಗಳ ವಿಚಾರಗಳಲ್ಲಿ ವಿರೋಧ ಕಾಣೆಯಾದದ್ದು—ಇವೇ ಮೊದಲಾದವು ತೀವ್ರಸ್ವರೂಪದ ಸಮಾಜಸುಧಾರಣೆಗಳು. ಇವುಗಳಲ್ಲಿ ಕೆಲವು ಉಜ್ವಲ ಬಹುಜನಾಭಿಪ್ರಾಯದ ಬೆಂಬಲವನ್ನು ಪಡೆದು ದೇಶದ ಕಾನೂನುಗಳಾದವು. ಹಳೆಯ ಸಂಪ್ರದಾಯದ ಮೇಲೆ ತೀವ್ರ ಆಘಾತವನ್ನುಂಟುಮಾಡಿದಾಗ್ಯೂ ಇವು ಸಾಮಾಜಿಕ ಸಂಘರ್ಷವನ್ನು ಹುಟ್ಟುಹಾಕಲಿಲ್ಲ; ಬದಲಿಗೆ ಆ ಸಂಪ್ರದಾಯವು ಪುನರ್ನವೀಕರಣಗೊಂಡು ಬೆಳೆಯುವುದಕ್ಕೆ ಸಹಾಯಮಾಡಿದವು.

> ಹಿಂದಿನದರ ಮೇಲೆ ಮುಂದೆ ಬರುವುದನ್ನು ನಿರ್ಮಿಸಬಹುದು. ಆದ್ದರಿಂದ ನಿಮಗೆ ಸಾಧ್ಯವಾದಷ್ಟೂ ಹಿಂದೆ ನೋಡಿ, ಹಿಂದಿನ ಅಮೃತಚಿಲುಮೆಯಿಂದ ತೃಪ್ತರಾಗುವವರೆಗೆ ಪಾನಮಾಡಿ. ಅನಂತರ ಮುಂದೆ ನೋಡಿ, ಮುಂದೆ ಅಡಿ ಇಡಿ, ಭಾರತವನ್ನು ಹಿಂದಿಗಿಂತ ಉಜ್ವಲತರ ಮಾಡಿ, ಉನ್ನತ ಶಿಖರಕ್ಕೆ ಕೊಂಡೊಯ್ಯಿರಿ ಎಂದು ಹೇಳುತ್ತೇನೆ.
>
> *—ಸ್ವಾಮಿ ವಿವೇಕಾನಂದ.*

ನವಯುಗದಲ್ಲಿ ಭಾರತೀಯ ಸಂಪ್ರದಾಯದ ಬೆಳವಣಿಗೆ ಹಾಗೂ ವಿಕಾಸದ ಇನ್ನೊಂದು ಜ್ವಲಂತ ಅಂಶವೆಂದರೆ ಭಾರತೀಯ ಸ್ತ್ರೀ ಜನಜಾಗೃತಿ ಹಾಗೂ ಉನ್ನತ ಜವಾಬ್ದಾರಿ ಸ್ಥಾನಗಳಿಗೆ ಅವರ ಸೇರ್ಪಡೆ. ಅನೇಕ ಪಾಶ್ಚಾತ್ಯರಾಷ್ಟ್ರಗಳಲ್ಲಿಯಂತೆ ಭಾರತವು ಸ್ತ್ರೀವಿಮೋಚನಾ ಚಳುವಳಿಯನ್ನು ಎದುರಿಸಬೇಕಾಗಲಿಲ್ಲ ಎಂಬುದು ಗಣನೀಯ. ಈ ಮಹತ್ವದ ಸಂಗತಿಯು ಭಾರತೀಯ ಸಂಪ್ರದಾಯದ ಸಾಮಾಜಿಕ ವಿವೇಕವನ್ನು ಸೂಚಿಸುತ್ತದೆ. ಸ್ತ್ರೀಯರ ಆಶೋತ್ತರ ಹಾಗೂ ಬೇಡಿಕೆಗಳಿಗೆ ಲೋಕದೃಷ್ಟಿಯು ವಿರೋಧವಾಗಿದ್ದು, ಈ ದೃಷ್ಟಿಯನ್ನು ಪುರುಷ ಸಮುದಾಯವು ಪ್ರಚಲಿತ ಭಾವನೆಗಳಿಗೆ ವಿರೋಧವಾಗಿ ಎತ್ತಿಹಿಡಿದಾಗ, ಸ್ತ್ರೀವಿಮೋಚನಾ ಚಳುವಳಿಯು ಸಂಭವನೀಯವಾಗುತ್ತದೆ. ಇದು ನವೀನ ಪಾಶ್ಚಾತ್ಯ ಐತಿಹಾಸಿಕ ಅನುಭವ. ಆದರೆ ಭಾರತದಲ್ಲಿ ಪುರುಷರೇ ಮುಂದೆ ಬಂದು ಸ್ತ್ರೀಯರ ಬೇಡಿಕೆಗಳನ್ನು ಎತ್ತಿಹಿಡಿಯುವ ಮೂಲಕ ಕಾಲಕ್ಕೆ ತಕ್ಕಂತೆ ನಡೆದುಕೊಂಡರು; ಈ ಮೂಲಕ ಅವರು ಭಾರತೀಯ ಸಂಪ್ರದಾಯದ ಆಧ್ಯಾತ್ಮಿಕ ಅಂಶವನ್ನು, ಇತ್ತೀಚಿನ ರಾಮಕೃಷ್ಣ-ವಿವೇಕಾನಂದರ ನಿರ್ದೇಶನದಂತೆ ಎತ್ತಿಹಿಡಿದಂತಾಯಿತು.

ಅಂತರರಾಷ್ಟ್ರೀಯ ಅಧ್ಯಯನಗಳ ಪ್ರಕಾರವೇ ಭಾರತದಲ್ಲಿ ಕುಟುಂಬಯೋಜನೆಯಂಥ ಸಮಾಜಸುಧಾರಣೆಗಳಿಗೆ ಪ್ರತಿರೋಧ ಇಲ್ಲದಿರುವುದು ಭಾರತೀಯ ಸಂಪ್ರದಾಯದ ಹೊಂದಾಣಿಕೆಯ ಗುಣಕ್ಕೆ ಇನ್ನೊಂದು ಉದಾಹರಣೆ. ಸಮಾನತೆಯ ಗುರಿಯನ್ನೂ ವಿಶಾಲ ಪ್ರಜಾಸತ್ತಾತ್ಮಕ ತಳಹದಿಯನ್ನೂ ಉಳ್ಳ ಭಾರತಸಂವಿಧಾನವು, ಭಾರತೀಯ ಸಂಪ್ರದಾಯದ ಈ ಹೊಂದಾಣಿಕೆಯ ಸಾಮರ್ಥ್ಯವನ್ನೂ ವಿಶಾಲ ದೃಷ್ಟಿಯ ವಿವೇಕವನ್ನೂ ಹೊಂದಿದೆ. ರಾಷ್ಟ್ರೀಯ ಸಂಪ್ರದಾಯದ ಜೀವಂತಿಕೆ ಹಾಗೂ ವಿವೇಕದ ಇನ್ನೊಂದು ಸತ್ಫಲವೆಂದರೆ, ಪ್ರಚಲಿತ ಪ್ರಪಂಚದ ಅತಿ ದೊಡ್ಡ ಪ್ರಜಾಸತ್ತೆಯೆನಿಸಿದ, ಇನ್ನೂರು ಮಿಲಿಯಕ್ಕೂ ಅಧಿಕ ಮತದಾರರನ್ನುಳ್ಳ ಭಾರತದಲ್ಲಿ ಚುನಾವಣೆಗಳು ಯಶಸ್ವಿಯಾಗಿ ನಡೆದು ಪ್ರಜಾಪ್ರಭುತ್ವವು ಆರೋಗ್ಯಕರವಾಗಿ ಕೆಲಸಮಾಡುತ್ತಿರುವುದು. ❋